(ರೂ. ಕೋಟಿಗಳಲ್ಲಿ)

ವರ್ಷ	ಯೋಜನೆ	ವಿಶೇಷ ಘಟಕ ಯೋಜನೆಗೆ ವಿಶೇಷ ಕೇಂದ್ರೀಯ ನೆರವು	ಗಿರಿಜನ ಯೋಜನೆಗೆ ವಿಶೇಷ ಕೇಂದ್ರೀಯ ನೆರವು.	ಯೋಜನೇತರ	ಒಟ್ಟು ಮೊತ್ತ
1997-98	215.36	13.89	7.30	63.69	300.24
1998-99	194.80	18.20	8.55	69.24	290.79
99-2000 (ಪರಿಶಿಷ್ಟ ಜಾತಿ ಮಾತ್ರ)	203.37	20.97	-	73.37	297.71
ಒಟ್ಟು	613.53	53.06	15.85	206.30	888.74

ಹಿಂದುಳಿದ ವರ್ಗದವರಿಗೆ ಬಂಡವಾಳ ಹೂಡಿಕೆಗೆ ಮಂಜೂರಾತಿ.

2419(1937)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಹಿಂದುಳಿದ ವರ್ಗದವರಿಗೆ ಬಂಡವಾಳ ಹೂಡಿಕೆಗೆ ಮಂಜೂರು ಮಾಡಿರುವ ಹಣ ಎಷ್ಟು?

ಆ) ಕಳೆದ 3 ವರ್ಷಗಳಲ್ಲಿ ಎಷ್ಟು ಜನ ನಿರುದ್ಯೋಗಿಗಳು ಸ್ವಯಂ ಉದ್ಯೋಗ ತರಬೇತಿಯಡಿಯಲ್ಲಿ ತರಬೇತಿಗಳನ್ನು ಪಡೆದಿದ್ದಾರೆ? (ವರ್ಷಾವಾರು ಮಾಹಿತಿ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಕಳೆದ 3 ವರ್ಷಗಳಲ್ಲಿ ರೂ. 1769.00 ಲಕ್ಷಗಳನ್ನು ಬಂಡವಾಳವಾಗಿ ಸರ್ಕಾರ ಮಂಜೂರು ಮಾಡಿರುತ್ತದೆ.

ಆ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ವಿವಿಧ ಸ್ವಯಂ ಉದ್ಯೋಗ ತರಬೇತಿಯನ್ನು ಹಿಂದುಳಿದ ವರ್ಗದವರಿಗಾಗಿ ಕಳೆದ 3 ವರ್ಷಗಳಲ್ಲಿ 3442 ಜನರು ಸ್ವಯಂ ಉದ್ಯೋಗ ಯೋಜನೆಯಡಿ ಪಡೆದಿರುತ್ತಾರೆ. ವರ್ಷಾವಾರು ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ವರ್ಷ	ತರಬೇತಿ ಪಡೆದವರ ಸಂಖ್ಯೆ
1)	1997-98	1267
2)	1998-89	745
3)	1999-2000	1430
	ಒಟ್ಟು	3442

ಪೌರಕಾರ್ಮಿಕರ ನೇಮಕಾತಿಯಲ್ಲಿ ಅನುಸರಿಸುತ್ತಿರುವ ದ್ವಿಮುಖ ನೀತಿ.

2421(3102)

ಶ್ರೀ ನಾರಾಯಣ ಸ್ವಾಮಿ (ಅನೇಕಲ್): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಪೌರ ಕಾರ್ಮಿಕ ಹುದ್ದೆಗಳ ನೇಮಕಾತಿಯಲ್ಲಿ ಮಹಾನಗರಪಾಲಿಕೆ ಮತ್ತು ಪುರಸಭೆಗಳಿಗೆ ನೇಮಕಾತಿ ವಿಷಯದಲ್ಲಿ ದ್ವಿಮುಖ ನೀತಿ ಅನುಸರಿಸುತ್ತಿರುವುದು ನಿಜವಲ್ಲವೆ?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಮಹಾನಗರ ಪಾಲಿಕೆಗಳಲ್ಲಿ ಹಾಗೂ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಪೌರಕಾರ್ಮಿಕರ ಹುದ್ದೆಗಳು ಇದೆ. ಇವುಗಳನ್ನು ಸಂಬಂಧಿಸಿದ